ಪರಿಶಿಷ್ಟ ಜಾತಿ ಮತ್ತು ವರ್ಗ ಇವರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಉಚಿತ ನಿವೇಶನಗಳ ಬಗ್ಗೆ

೨೪೦. ಶ್ರೀ ಪೆರಿಕಲ್ ಎಂ, ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಡಾ : ಅಂಬೇಡ್ಕರ್‌ರವರ ಜನ್ಮ ಶತಾಬ್ದಿಯ ಅಂಗವಾಗಿ ದಿನಾಂಕ ೧೪-೪-೧೯೯೦ರಂದು ಹರಿಜನ ಗಿರಿಜನರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಉಚಿತ ನಿವೇಶನಗಳನ್ನು ಕೊಟ್ಟ ಸಂಖ್ಯೆ ?

ಆ) ಉಪಯೋಗ ಪಡೆದುಕೊಂಡವರ ನಾಮಾಂಕಿತ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ೨ (ಎರಡು)

ಆ) ಶ್ರೀ ತಂಗವೇಲು ಮತ್ತು ಶ್ರೀ ಪಿ. ಕೆ. ಸೇತು,

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬಡಾವಣೆಗಳಲ್ಲಿ ಮೂಲ ನಾಗರೀಕ ಸೌಲಭ್ಯಗಳು ಸ್ಥಗಿತಗೊಂಡಿರುವ ಬಗ್ಗೆ

೨೪೧. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಬಡಾವಣೆಗಳ ಹೆಸರುಗಳು.

ಆ) ಪ್ರತಿಯೊಂದು ಬಡಾವಣೆಯಲ್ಲೂ ಇಲ್ಲಿಯವರೆವಿಗೂ ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು ?

ಇ) ಸದರಿ ಬಡಾವಣೆಗಳ ರಸ್ತೆಗಳಲ್ಲಿ ಕಸ ಗುಡಿಸಲು ಮತ್ತು ಕಸ ಕಡ್ಡಿ ತೆಗೆಯಲು ವ್ಯವಸ್ಥೆ ಇಲ್ಲದಿರುವುದು ನಿಜವೇ ?

ಈ) ಹಾಗಿದ್ದಲ್ಲಿ ಸರ್ಕಾರವು ಮಾಡಲಿರುವ ಸೂಕ್ತ ವ್ಯವಸ್ಥೆಗಳೇನು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಪ್ರಾಧಿಕಾರದ ಅಧೀನದಲ್ಲಿ ೭೩ ಬಡಾವಣೆಗಳಿವೆ. ಬಡಾವಣೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಪೂರ್ಣಗೊಂಡಿರುವ ೩೯ ಖಾಸಗಿ ಬಡಾವಣೆಗಳು ಹಾಗೂ ೧೩ ಪ್ರಾಧಿಕಾರದ ಬಡಾವಣೆಗಳು (ಒಟ್ಟು ೫೨) ಪ್ರಾಧಿಕಾರದ ಉಸ್ತುವಾರಿಯಲ್ಲಿದೆ. ಈ ೫೨ ಬಡಾವಣೆಗಳಲ್ಲಿ ಹೆಚ್ಚು ಕಡಿಮೆ ಎಲ್ಲಾ ನಿವೇಶನಗಳಲ್ಲಿಯೂ ಮನೆಗಳನ್ನು ಕಟ್ಟಲ್ಪಟ್ಟಿದ್ದು, ಬೆಂಗಳೂರು ಮಹಾನಗರ ಪಾಲಿಕೆಗೆ ವರ್ಗಾಯಿಸಲು ಸಿದ್ಧವಾಗಿದೆ. (ಪಟ್ಟಿಯನ್ನು ಲಗತ್ತಿಸಿದೆ).

೨೧ ಹೊಸ ಬಡಾವಣೆಗಳಲ್ಲಿ ಕಾವೇರಿ ಕೆಲಸಗಳು ಇನ್ನು ನಡೆಯುತ್ತಿದ್ದು, ಈ ಬಡಾವಣೆಗಳಲ್ಲಿ ಹೊಸ ಮನೆಗಳು ಬರುತ್ತಿವೆ. (ಪಟ್ಟಿಯನ್ನು ಲಗತ್ತಿಸಿದೆ).

ಪ್ರತಿಯೊಂದು ಬಡಾವಣೆಯಲ್ಲಿಯೂ ಇರುವ ಮನೆಗಳ ಸಂಖ್ಯೆಯ ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) ರಸ್ತೆಗಳನ್ನು ಗುಡಿಸಲು : ಪೌರ ಕಾರ್ಮಿಕರು ಪ್ರಾಧಿಕಾರದಲ್ಲಿಲ್ಲ. ಕಸಕಡ್ಡಿಗಳನ್ನು ತೆಗೆಯುವ ಕೆಲಸವನ್ನು ಗುತ್ತಿಗೆದಾರರಿಗೆ ವಹಿಸಲಾಗಿದೆ.

ಈ) ಈ ಎಲ್ಲಾ ಬಡಾವಣೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ವರ್ಗಾಯಿಸಿದ ಮೇಲೆ ಮಹಾನಗರ ಪಾಲಿಕೆಯು ಕ್ರಮಬದ್ಧವಾಗಿ ಕಸ ಗುಡಿಸಲು ಕ್ರಮ ಕೈಗೊಳ್ಳುವುದು.